IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ವಚನಕಾರ್ತಿಯರ ಕಾಯ ಕಲ್ಪನೆ

**ಡಾ. ಸವಿತಾ ರವಿಶಂಕರ್**
**ಸಹಾಯಕ ಪ್ರಾಧ್ಯಾಪಕಿ**
**ಕನ್ನಡ ವಿಭಾಗ**
**ಕ್ರೈಸ್ತ ಅಕಾಡೆಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್**
**ಬೇಗೂರು ಕೊಪ್ಪ ರಸ್ತೆ, ಬೆಂಗಳೂರು**

**ಪ್ರಸ್ತಾವನೆ:**

ವಚನಗಳು ಕನ್ನಡ ಚಿಂತನೆಯ ಪ್ರಮುಖ ಆಕರಗಳು.ಕನ್ನಡ ಸಾಹಿತ್ಯ ಚರಿತ್ರೆಯ ಪ್ರಮುಖವಾದ ತಿರುವನ್ನು ಪಡೆದ ಘಟ್ಟ.ಅಂದರೆ "ಸ್ತ್ರೀ ಚಿಂತನೆ"ಯ ಅಭಿವ್ಯಕ್ತಿ ಕನ್ನಡದಲ್ಲಿ ಮೊದಲು ವ್ಯಕ್ತವಾದ ಕಾಲ.ಸಮಾಜದಲ್ಲಿ ಕಾಣುವ ಸಹಜ ಅಂಶಗಳನ್ನು ಉದಾಹರಿಸುತ್ತ "ನಾ ಹೀಗೆ" ಎಂಬ ಅಧಿಕೃತತೆ ಪಡೆಯುತ್ತದೆ. ಸಮಾಜಕ್ಕೆ 'ಹೀಗಿರಬೇಕು' ಎಂಬ ಬಸವನ ನಿಲುವುಗಳಿಗಿಂತ 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ' ಎಂಬ ಮಾತುಗಳಿಗಿಂತ ವಚನಕಾರ್ತಿಯರ ನಿಲುವು ಭಿನ್ನವೇ ಆಗುತ್ತಾ ಸಾಗುತ್ತದೆ. ಸಮಾಜ ಮುಖಿಯಾಗುತ್ತ, ಎಲ್ಲದರೊಳಗೊಂದಾಗಿ ನಾ ಹೀಗೆ ನೀ ಹೇಗಾದರು ಒಳಗೊಳ್ಳು ಎಂದು ದೈವಕ್ಕೆ ಹೇಳುತ್ತಾ ಸಾಗುವ ಹಾದಿಯ ಖಚಿತತೆಯೇ ಅವರ ಭಿನ್ನತೆಯಾಗಿದೆ.

**"ಕಾಯವಿಲ್ಲದ ಶರಣಂಗೆ ಕರ್ಮವಿಲ್ಲ"** – ದೇಶಿಕೇಂದ್ರ ಸಂಗನ ಬಸವಯ್ಯ ಇವನ ನಂತರ**"ಕಾಯವೆಂಬ ಕಲ್ಪಿತವ ಕಳೆದು"** ಅಲ್ಲಮನ ಮಾತುಗಳನ್ನು ನೆನೆಯುತ್ತಲೇ ದೇಹದ ವಾಸನೆಯೊಂದೆ ಕೆಲಸಮಾಡದೆ ಶರಣಂಗೆ ಮುಕ್ತಿಯಿಲ್ಲ ಎಂಬುದು ವಚನಕಾರರ ವಿವೇಚನೆಯಾಗಿದೆ.ವಚನ ಕಾರ್ತಿಯರು ಹೇಗೆ ಕಾಯದೊಂದಿಗೆ ವಿವೇಚಿಸುತ್ತಾರೆ ಎಂಬುದರ ವಿಶ್ಲೇಷಣೆಯನ್ನು ಮುಂದೆ ಕೈಗೊಳ್ಳಲಾಗಿದೆ. ಕೆಲವು ವಚನಕಾರ್ತಿಯ ಕಾಯ ಕಲ್ಪನೆಯನ್ನು ಕುರಿತು ಚರ್ಚಿಸೋಣ.

**ಲಿಂಗಮ್ಮ:–**

"ಕಾಯವೆಂಬ ಕದಳಿ" ಎಂಬ ಮಾತಲ್ಲಿ ಆರಂಭಿಸುವ ಈಕೆಗೆ ಕಾಯ ನಿರಂತರ ಕಳವಳಕ್ಕೆ ಒಳಗಾಗುವಂಥದ್ದು. ಸಾಮಾನ್ಯವಾಗಿ ಎಲ್ಲರನ್ನು ಕಾಡುವಂಥದ್ದು. ಈ ಕಾಯವನ್ನೇ ಶರಣರು/ಶರಣೆಯರು "ಲಿಂಗ"ವನ್ನಾಗಿ ಮಾಡಿಕೊಂಡರು. "ಅರಹು" "ಮರೆವಿನಲಿ"ನ ಚಲನೆ "ಜೀವಬುದ್ಧಿ" "ಪರಮ ಬುದ್ಧಿಯನ್ನಾಗಿ" ಮಾಡಿಕೊಂಡು ಬೆಳೆದರು. ಲಿಂಗವೇ ಅವರ ಜೈವಿಕಲಿಂಗವಾಗಿ ಅದರ ಬೆಳಕಲ್ಲಿ ಸಮಾಜದಲ್ಲಿ ಬಯಲಾದರು ಎಂಬ ಅಂಶಗಳನ್ನು ತಮ್ಮ ವಚನದಲ್ಲಿ ಬಿಂಬಿಸುತ್ತಾಳೆ (ವ ಸಂ.1284). **"ಕಾಯವೆಂಬ ಕದಳಿಯ ಹೊಕ್ಕು",** ವಚನ 1259ರಲ್ಲಿ ಕೂಡಾ– ಭವದ ದಾಂಟಿದಲ್ಲದೆ ಘನವ ಕಾಣಬಾರದೆಂಬುದು ಎಂಬುದೇ ಅವಳ ನೀತಿ. ಬದುಕು, ಸಂಸಾರ ಗೆದ್ದು ನಂತರ ಶಿವನ ಮೆಚ್ಚಿಸುವ ಹವಣಿಕೆ ಎನ್ನುವಂಥದ್ದು. ವಚನ 1244 ರಲ್ಲಿ ಕಾಯುವನೆ ಪ್ರಾಸಾದ – ಯೋಗ ಸಮಾಧಿಗೆ ಕೊಂಡೊಯ್ಯುವಂಥವರು ಶರಣರು ಎನ್ನುತ್ತಾಳೆ.

**ಆಯ್ದಕ್ಕಿ ಲಕ್ಕಮ್ಮನ:–**

ದೇಹವೇ ಮುಖ್ಯ ಇಲ್ಲದಿರೆ ಜೀವದ ಓಡಾಟ ಹೇಗೆ ಸಾಧ್ಯ? ಭಾವವಿಲ್ಲದ ಭಕ್ತಿಯ ಹಾಗೆ ದೇಹವು ಜೀವಕ್ಕೆ ಬಹುಮುಖ್ಯವಾದುದು.(622 (622) 201 ಪುಟ .ಕಾಯವಳಿದ ಠಾವಿನಲ್ಲಿ ಜೀವದ ಎಡೆಯೂಟ ಉಂಟೆ? ಭಾವವಿಲ್ಲದ ಭಕ್ತಿ ಹೋಯಿತ್ತು ಮಾರಯ್ಯಪ್ರಿಯ ಅಮರೇಶ್ವರ ಲಿಂಗವ ಮುಟ್ಟದ ಎನ್ನುತ್ತಾಳೆ.

**ಮೋಳಿಗೆ ಮಹಾದೇವಿಯ:–**

**"ಘಟಕ್ಕೂ ಆತ್ಮಕ್ಕೂ ಭವವುಂಟೇ"** ಎಂಬ ವಚನ ಕಾಯ ಎಂಬುದು ಕದಳಿ, 'ಕಾಯ ಕರ್ಮದ ಅಧೀನ', ಕಾಯದ ಭ್ರಮೆ ಕೈಲಾಸವನ್ನು ಸೃಷ್ಟಿಸುತ್ತದೆ. ಕಾಯ–ಜೀವಗಳ ಭೇದವನ್ನು ಅರಿಯಬೇಕು. ಕಾಯ ಇದ್ದಮೇಲೆ ಕರ್ಮಗಳಿಂದ ಮುಕ್ತಿ ಎಲ್ಲಿ ಎಂಬಂತ ವಚನಗಳು ಸಾಲಾಗಿ ಕಂಡು ಬರುತ್ತದೆ ಹಾಗು ಸಮಾಜವನ್ನು ಪ್ರಶ್ನಿಸುತ್ತಾ ಸಾಗುವುದು ವಚನಗಳಲ್ಲಿ ಕಾಣಬಹುದು. ಕಾಯ ಇದ್ದರೆ ಮಾತ್ರ ಲಿಂಗ ಪೂಜೆ ಸಾಧ್ಯ ಇಲ್ಲದಿದ್ದರೆ ಸಾಧ್ಯವೆಲ್ಲಿದೆ? ನೀ – ನಾ, ಪುರುಷ – ಸತಿ ಎಂಬ ಭೇದಕ್ಕೆ ಕಾಯ, ಜೀವ ಎಂಬ ಉಭಯ ಕಲ್ಪನೆ ಸಹಜ ಎಂದೆನ್ನುತ್ತಾಳೆ. ಕಾಯ ಒಂದರೊಳಗೊಂದು ಬೆರೆತು ಕೈಲಾಸಕ್ಕೆ ಹೋಗುವೆ ಎಂದರೆ ಹೇಗೆ ಸಾಧ್ಯ. ಈ ಭಿನ್ನತೆಯ ಕಲ್ಪನೆಯಲ್ಲಿ ಕೈಲಾಸಕ್ಕೆ ಹೋಗಲು ಸಾಧ್ಯವಿಲ್ಲ. ದೇಹ–ಆತ್ಮಕ್ಕೆ ಭಿನ್ನ ಲಿಂಗವ ಗುರುತಿಸಿ ಪೂಜಿಸುವ ಕ್ರಮವೇ ದೇಹ–ಆತ್ಮದ ನಡುವಿನ ನೋವಿನ ಕ್ರಮ. ಬದುಕೆಂಬುದು ದೇಹದ ಕರ್ಮ, ಬದುಕೆಂಬುದು ಆತ್ಮದ ವಿಃಕರ್ಮ ಎಂಬ ಚಲನೆಯೇ ಅರ್ಥವಿಲ್ಲದ್ದು ಎಂದು ತಿರಸ್ಕರಿಸುತ್ತಾಳೆ.

ಇಂದ್ರಿಯಗಳ ಅನುಭವದಿಂದ ಪ್ರಭಾವಿತನಾಗದ ಶರಣನಿಗೆ ಕಾಯಕ್ಕೆ – ಕರ್ಮ ಇಲ್ಲ, ಜೀವಕ್ಕೆ ಭವ ಎಂಬುದು ಇಲ್ಲ. ಹಾಗಾಗಿ ಕೂಟದ ಕಲ್ಪನೆಗಳೇ ಇಲ್ಲ ಎಂದು ಕೈಲಾಸ – ಭೂಮಿ ಕಲ್ಪನೆ, ದೇಹ–ಜೀವ, (ಆತ್ಮ) ಕಲ್ಪನೆ, ಕರ್ಮ, ಭಾವ, ಕಾಯದ ಕಲ್ಪನೆಯಲ್ಲಿನ ಭಿನ್ನತೆ ತಿರಸ್ಕರಿಸುತ್ತಾಳೆ.

ಕಾಯವಿಹನಳಕ್ಕು ಕರ್ಮವ ಬಿಟ್ಟ ಪರಿ ಇನ್ನೆಂತೋ? ಜೀವ ವಿಹನ್ನಕ್ಕ ಅರ್ಪಿಸದೆ ತಾನುಂಬ ಪರಿ" ? 909, ಪುಟ 289.

955 ವಚನ ಸಂಖ್ಯೆ, ಪುಟ – 306 ಕಾಯಕ್ಕೆ ಕೈಲಾಸ ಎಂಬುದಿಲ್ಲ, ಭಾವಕ್ಕೆ ಭಯವೆಂಬುದಿಲ್ಲ.ಅನಲನಲ್ಲಿ ಅರೆತ ದ್ರವ್ಯದಂತೆ ಅದು ಅಮೂರ್ತಿ – ಭಾವ.ಕಾಯ(ದೇಹ), ಆತ್ಮಕಲ್ಪನೆ ಭಿನ್ನತೆಯ ಕಲ್ಪನೆಯನ್ನು ಬದುಕಿನಲ್ಲಿ ತಿರಸ್ಕರಿಸುತ್ತಾಳೆ.

**ನೀಲಮ್ಮ:**

**ಕಾಯ ಅಥವಾ ಒಡಲಿನ ಕಲ್ಪನೆ**

ಅಂಗ – ಪ್ರಾಣದ ಕಲ್ಪನೆಯವನಲ್ಲ ತನ್ನ ಇಷ್ಟಲಿಂಗ ಕಾಯದಲ್ಲಿ ಕೈಅಲಗಿನಂಥವನು ಎಂದು "ಎಚ್ಚರ"ವನ್ನು ಬದುಕಿನಲ್ಲಿ ತರಬೇಕೆಂದು ತಿಳಿಸುತ್ತಾಳೆ. ಹಾಗೆಯೇ ದೇಹ–ಪ್ರಾಣ ಭಿನ್ನತೆಯ ಕಲ್ಪನೆಯನ್ನು ತಿರಸ್ಕರಿಸುತ್ತಾಳೆ. 'ರೂಪ ಅಳಿದು ನಿರೂಪ ಅಂಗವಳಿದು ವಿರಂಗಿಯದೆನು' ಎನ್ನುತ್ತ ಉಭಯದ ಕಲ್ಪನೆಯನ್ನೇ ತಿರಸ್ಕರಿಸುವುದನ್ನು ಕಾಣುತ್ತೇವೆ. 'ಬಡವನೆಂಬ ಎನ್ನ ಅಯ್ಯ ಐಕ್ಯನಾದ ಬಳಿಕ ಎನಗೆ ಕಾಯ, ಪ್ರಾಣ, ಹೃದಯದ ಹಂಗು ಇಲ್ಲದೆ ಪರಿಣಾಮ ಪ್ರಸಾದಿಯಾದೆ ಎನ್ನುತ್ತಾಳೆ.' ಕಾಯ ಪ್ರಾಣಗಳು ಒಂದನ್ನೊಂದು ಅಗಲಿ ಇರಲಾರದು.ಅವೆರಡಕ್ಕೆ ಮೂಲ ಬಸವ, ಸಂಗ, ಭಾವ, ಬಯಲು ಎಲ್ಲವು ಬಸವ ಎನ್ನುತ್ತಾಳೆ.

ಕಾಯವಿಲ್ಲದೆ ಸುಖವಿಲ್ಲ, ಆದರೆ ಸುಖ ಅಡಗಿರುವುದೆ ಕಾಯದಲ್ಲಿ ಎನ್ನುವಾಗ ರೂಪವಿಲ್ಲದೆ ರೂಪ, ನಿಯಮಗಳಿಲ್ಲದೆ ಕಳೆಯು, ಇಂದ್ರಿಯಗಳ ಸಂಗವಿಲ್ಲದೆ, ಸುಖ ಹೇಗೆ ಅಡಗಿದೆ, ಕರ್ಮದ ಸಾಂಗತ್ಯವನ್ನು ಕಳಿದಾಗ ಜಗತ್ತೆ ನಿಃಶಬ್ದವಾಗುತ್ತದೆ ಎನ್ನುತ್ತಾಳೆ.

'ಒಡಲಳಿದ ಕಾರಣ ಒಡಲಿಲ್ಲದ ಹೆಣ್ಣು ನಾನದೆನಯ್ಯಾ ಬಸವಾ' 'ಗುರುಬಸವನೆನ್ನ ಕಾಯದಲ್ಲಿ ಕಯ್ಯಲಗಿನಂತಿದ್ದನು' 'ಅಂಗದ ಸಂಗಿಗನಲ್ಲ ನಮ್ಮ ಬಸವಯ್ಯ ಪ್ರಾಣದ ಭ್ರಮೆಯವನಲ್ಲ ನಮ್ಮ ಬಸವಯ್ಯನು,(717,ಪುಟ236)'ರೂಪವಳಿದು ನಿರೂಪಿಯಾನು ಬಸವ, ಅಂಗವಳಿದು ನರಂಗಿಯಾನು ಬಸವ, ದ್ವಿಯವಳಿದ ಪ್ರಸಾದಿಯಾನು ಬಸವ'. (ವಚನ ಸಂಖ್ಯೆ: 733, **ಪುಟ.239)** ಕಾಯವಿಲ್ಲದೆ

ಪ್ರಾಣವಿರದು, ಪ್ರಾಣವಿಲ್ಲದೆ ಕಾಯವಿರದು, ಆ ಕಾಯಕ್ಕೆ ಪ್ರಾಣಕ್ಕೆ ಮೂಲಿಗನಾದ ಬಸವ, (ವಚನ ಸಂಖ್ಯೆ: 778, **ಪುಟ 251)** ಕಾಯವಿಲ್ಲದ ಸುಖವೆ ಸುಖವಿಲ್ಲದೆ ಅಡಗಿದೆ ಕರಣಂಗಳ ಸಂಗವನಳಿದು ಕರ್ಮವ ಮಾಟಕೂಟವ ಕಳೆದು (ವಚನ ಸಂಖ್ಯೆ: 815, ಪುಟ ಸಂಖ್ಯೆ.260)

**ಅಕ್ಕಮ್ಮ:–**

**ಒಡಲು ಹಾಗೂ ಕಾಯದ ಕಲ್ಪನೆ**

ಅಕ್ಕಮ್ಮನ ವಚನಗಳಲ್ಲಿ ಕಾಯ ಎಂಬುದು ಕಾಯಕದ ಭಾಗವೇ ಹಾಗಾಗಿ ಕಾಯದದ ಶುದ್ಧಿಯೇ ಕಾಯದ ಶುದ್ಧಿ. ಭಾವ ಎಂಬುದಕ್ಕಿಂತ ಕಾಯ ಎಂಬುದು ವ್ಯವಹಾರದ ವಾಸ್ತವದ ಜಗತ್ತಿನಲ್ಲಿ ನೆಲೆ ನಿಂತಿರುವುದು. ಕಾಯದ ಶುದ್ಧಿ, ಮನದ ಶುದ್ಧಿಗೆ ದಾರಿ ಅದು ಅರಿವಿನ ಶುದ್ಧಿಗೆ ದಾರಿ ಎಂಬುದನ್ನು ಅಭಿಪ್ರಾಯ ಪಡುತ್ತಾಳೆ.ಅಂಗಕ್ಕೆ ಆಚಾರ, ಮನಕ್ಕೆ ಅರಿವು, ಅರಿವಿಗೆ ಜ್ಞಾನವನ್ನು ವ್ರತವಾಗಿ ಕೈಗೊಂಡದ್ದಾಗಿರಬೇಕು ಎಂದು ಆಭಿಪ್ರಾಯ ಪಡುತ್ತಾಳೆ.(543 ನೇ ವಚನ, ವಚನ ಸಂಪುಟ) ದಲ್ಲಿನ ಮತ್ತೊಂದು ವಚನದಲ್ಲಿ ತಮ್ಮ ಭವ ಭಾವಗಳಿಗೆ ತಾವೆ ಜವಬ್ದಾರರು, ಅನುಭವ ಎಂಬುದಕ್ಕಿಂತ ಕ್ರಿಯೆಗಳಿಗೆ ತಪ್ಪಿದಲ್ಲಿ ಶಿವ ಮೆಚ್ಚನು ಎಂಬ ಭಾವವಿದೆ. ಕಾಯಕ್ಕೆ ಒಂದು ನಿಶ್ಚಿತ ಕ್ರಿಯೆ, ಆಚಾರ, ವ್ರತ ಬಹಳ ಮುಖ್ಯ ಎನ್ನುತ್ತಾಳೆ.(ವಚನ 551) ಕಾಯದ ಹೊರಗಿನ ಸುಖ/ ಒಳಗಿನ ಸುಖ ಎಂಬ ಬೇಧವ ಕಲ್ಪಿಸಿ ಅದನ್ನು ಶಿವನಿಗೆ ಅರ್ಪಿಸಬಲ್ಲೆಡೆಯಾದಲ್ಲಿ ಅರಿಯ ಬಲ್ಲಡೆಯಾದಲ್ಲಿ ಶಿವನ ಸಹಭೋಜನತ್ವ ದೊರೆಯುವುದು ಎನ್ನುತ್ತಾಳೆ (ವಚನ 508). ಭಾವಶುದ್ದಿ ಮುಖ್ಯವಾದುದು. ಮನ, ವಚನ, ಕಾಯ ಶುದ್ಧಿ, ಮಣ್ಣು, ಹೆಣ್ಣು, ಹೊನ್ನು ಅಂಗದಲ್ಲಿ ಅರಿಯಬೇಕು, ಅರ್ಪಿತ, ಅನರ್ಪಿತ, ತೃಪ್ತಿಯ ಅರಿಯಬೇಕು ಎನ್ನುತ್ತ ಆಚರಣೆ ಬಹಳ ಮುಖ್ಯವಾಗುವುದನ್ನು ಕಾಣಬಹುದು. ಕಾವ್ಯಾತ್ಮಕಕ್ಕಿಂತ ಸಿದ್ದಾಂತದ ಹಿನ್ನಲೆಯಲ್ಲಿ ಕಾಯದ ಬಗ್ಗೆ ಇಲ್ಲಿ ಅಭಿಪ್ರಾಯವ್ಯಕ್ತವಾಗಿದೆ. ವೇಷ ಎಲ್ಲಿಯದು? ವೇಷವ ತೋರಿ ಒಡಲ ಹೊರೆವ ದಾಸಿ ಮಕ್ಕಳಿಗೆ' (ವಚನ ಸಂಖ್ಯೆ: 477, ಪುಟ ಸಂಖ್ಯೆ.154 )

ಶರಣೆಯರಿಗೆ "ಕಾಯ" ಕಾಟ ಕೊಡುವ, ಬಾಧಿಸುವ ಹಾದಿಯಲ್ಲ. ಅರಿವಿಗೆ, ಬಯಲಾಗಲು ಆಧಾರವಾದುದು ಎಂದು ಹೇಳುತ್ತಾಳೆ. ಅಂಗಕ್ಕೆ ಆಚಾರ, ಮನಕ್ಕೆ ಅರಿವು ತಂದು ಕೊಡುವಂಥದ್ದು ಕಾಯದನುಭವಗಳು. ಹಾಗಾಗಿ ಭಕ್ತ, ಶರಣನ ಅನಾವರಣಕ್ಕೆ ಸಾಧನೆಗೆ ಕಾಯ ಮುಖ್ಯ ಎಂಬ ಆಲೋಚನೆ ಕಾಣುತ್ತೇವೆ. "ಭಕ್ತನ ಸತ್ಯದ ಕಾಯವ ಸತ್ಯವಳಿಯಿತ್ತು, ಉಳಿಯಿತ್ತೆಂಬ ಸಂದೇಹವಿಲ್ಲ. ಆತ ನಿಹಪರದಲ್ಲಿ ಸುಖಿ, ಆತನಾಚಾರವೇ ಪ್ರಾಣವಾದ ರಾಮೇಶ್ವರ ಲಿಂಗವು ತಾನೆ" ಎಂಬ ವಚನದಲ್ಲಿ ಅಭಿವ್ಯಕ್ತವಾಗುತ್ತದೆ.(584 ವಚನ ಸಂಖ್ಯೆ: ವಚನ ಸಂಪುಟ–5) ವಚನದಲ್ಲಿ ಚತುಷ್ಪಾದಿ ಮುಂತಾದ ವಿಹಂಗ, ಕೀಟಕ ಜೀವಗಳು ತಮ್ಮ ಕಾಯಕಗಳಲ್ಲಿ ಬದುಕ ನಡೆಸುವುದೇ ಶೀಲ. ಹಾಗೆಯೇ ಅಸಿ, ಕೃಷಿ, ವಾಣಿಜ್ಯ, ವಾಚಕ ಎಂಬ ಕಾಯಕಗಳ ಮಾಡುತ್ತ, ಪಾಪ–ಪುಣ್ಯ ಕಾರ್ಯಗಳ ಮಾಡುತ್ತ – ಕಾಯಕವೇ ಕಾಯ, ಅಂಗಕ್ಕೆ ಆಚಾರ, ಮನಕ್ಕೆ ಅರಿವು, ಅರಿವಿಗೆ ಜ್ಞಾನವಾಗುವ ಕೆಲಸದ ಅನುಭವಗಳು ಕಾಯದ ಪ್ರಮುಖ ಸ್ವರೂಪ ಎಂಬಂಶಗಳಿಗೆ ಆದ್ಯತೆ ನೀಡುತ್ತಾರೆ.ಕಾಯ–ಕಾಯಕವಿಲ್ಲದೆ ಪೂರ್ಣವಾಗದು. ಕಾಯಕ ಭಗವಂತನ ಅರಿವಿಗೆ ಕಾರಣವಾಗುತ್ತದೆ.(551) ವಚನದಲ್ಲಿ ಕಾಯದಹೊರಗಿನ, ಒಳಗಿನಸುಖದ ಬಗ್ಗೆ ಹೇಳುತ್ತ ಅದು ಶಿವಾರ್ಪಿತವಾಗಬೇಕು.ಏಕಾಂತಸತಿಕೂಟ, ಇದಿರಿಟ್ಟ ಪದಾರ್ಥಗಳು ಎರಡು ಸಹಭಾಜನ,ಸಹಭೋಜನ ಕಾಯವಿದ್ದಲ್ಲಿ ಸಾಧ್ಯ. ಅದರ ಮೂಲಕವೇ ದೈವದಾನುಭವ ಸಾಧ್ಯ.ಯೋನಿ, ಸ್ವಪ್ನ, ಸುಷುಪ್ತಿ ಭಾವದ ಸಹಭೋಜನ ಉಂಟಾದಾಗ ಮಾತ್ರ ಕಲ್ಲಿನೊಳಗಣ ನೀರು, ನೀರಿನೊಳಗಣ ಶಿಲೆ ಅರ್ಥವಾಗುತ್ತದೆ ಎಂದು ಸುಖದ ಸ್ವರೂಪವನ್ನು ತಿಳಿಸುತ್ತಾಳೆ.ದೇಹದ ಸುಖದಿಂದ ದೈವದಾನುಭವ ಅದರ ಸಾಂಗತ್ಯ ಅನುಭವಿಸಲು ಸಾಧ್ಯ ಎನ್ನುತ್ತಾಳೆ."ಲಿಂಗಕ್ಕೂ ತಮಗೂ ಸಹಭಾಜನ ಸಹಭೋಜನವಾದಲ್ಲಿ ಇದಿರಿಟ್ಟ ಪದಾರ್ಥಂಗಳ ಲಿಂಗಕ್ಕೆ ತೋರಿ, ತಾ ಕೊಂಬಲ್ಲಿ ದೃಷ್ಟವಾಯಿತ್ತು", (ವಚನಸಂಖ್ಯೆ–510) ವಚನದಲ್ಲಿ ಕಾಯ ಎಂಬುದು ಅರಿವಿಗೆ ಆಚಾರಕ್ಕೆ ಭಿನ್ನವಿಲ್ಲದ್ದನ್ನು ಕಂಡುಕೊಳ್ಳಲು ಇರುವಂಥದ್ದು ಎಂಬರ್ಥವಿದೆ. ಕ್ರಿಯೆ ವಸ್ತುವಾಗಿ, ವಸ್ತುವೇ ಕ್ರಿಯೆಯಾಗುವ ಕ್ರಮವಿದೆ.(ವಚನ ಸಂಖ್ಯೆ451) ಸನ್ಮಾರ್ಗವೇ ಆತ್ಮ, ವ್ರತವೇ ಘಟವಾಗಿ (ದೇಹವಾಗಿ) ನಡೆವ ಜೀವನ ಕಾಯ–ಜೀವ ಭಿನ್ನ ಎಂದಾಗದೆ ಮಹಾವ್ರತಿಯಾಗಿ ದೈವವು ನಮಿಸುತ್ತದೆ ಎಂದೆನ್ನುತ್ತಾಳೆ."ವ್ರತವೇ ಘಟವಾಗಿ, ಸನ್ಮಾರ್ಗವೇ ಆತ್ಮವಾಗಿ ಇಂತೀ ವ್ರತ ಸಂಬಂಧ ಕಾಯ ಜೀವದಂತೆ ಏಕವಾಗಿಪ್ಪ ಮಹಾವ್ರತಿಗೆ ಆಚಾರವೆ ಪ್ರಾಣವಾದ ರಾಮಲಿಂಗೇಶ್ವರ ನಮೋ ನಮೋ ಎಂದು

ಕೃತಾರ್ಥನಾದನು".ಕಾಯಯೆಂಬುದು ಸಾಧನೆಯ ಪಥದಲ್ಲಿ ವ್ರತ–ನೇಮವಿದ್ದಂತೆ.ದೈವವನ್ನು ಕಾಣುವ, ಕಂಡುಕೊಳ್ಳುವ ಹಾದಿ, ದೇಹದಾನುಭವದಿಂದ ದೈವದಾನುಭವ ಅನುಭವಿಸಲು ಇರುವ ಏಕೈಕ ಮಾರ್ಗ. ಹಾಗಾಗಿ ಕಾಯಯೆಂಬುದು "ನೀರಿನೊಳಗಿನಶಿಲೆ, ಶಿಲೆಯೊಳಗಿನನೀರು" ಎಂಬಂತ ಹಾದಿಯೇ ಆಗಿದೆ. ಯೋನಿ, ಸ್ವಪ್ನ, ಸುಷುಪ್ತಿಯ ಹಾದಿ, ದೇಹದೊಳಗಿನ – ಹೊರಗಿನ ಸುಖಗಳು ಭಗವದಾನುಭವ ಕಟ್ಟಿಕೊಡುವಂಥದ್ದಾಗಿದೆ.ಕ್ರಿಯೆಗಳೆಲ್ಲ, ದೇಹದಾನುಭವಗಳೆಲ್ಲ ಶಿವನಾದಾಗ ಆಚಾರಗಳೆಲ್ಲ ಅರಿವಿನ ಮೂಲವಾದಾಗ "ಕಾಯ–ಕಾಯಕ" ಬಹಳ ಮುಖ್ಯ ಎನಿಸುತ್ತದೆ.

**ಅಕ್ಕಮಹಾದೇವಿ:–**

ಕಾಯ ಎಂಬುದು ದೈವದಾನುಭವಗಳನ್ನು ಹಿಡಿದಿಡಲು ಪ್ರಧಾನವಾದ ಸಾಧನವಾಗಿ ಕಂಡುಬರುತ್ತದೆ.ದೇಹದಾನುಭವಗಳು ಶಿವನಿಗೆ ಅರ್ಪಿತ. ಈ ಅನುಭವಗಳು, ಗುಣಾತಿಶಯಗಳಿಂದ ಕೂಡಿದಾಗಿರುವುದರಿಂದ ಅವುಗಳ ಹಿಡಿತಕ್ಕೆ ಒಳಗಾದರೆ ಮೋಹಕ್ಕೆ ಒಳಗಾದಂತೆ ಅವು ವಾಸ್ತವವಲ್ಲ. ಅನುಭವಗಳೆಲ್ಲವು ಅವನ ಮುಟ್ಟಿ ನನ್ನ ಬಳಿಗೆ ಬರಲಿ ಎಂಬುದೇ ಅವಳ ಆಶಯ ಹಾಗು ಪ್ರಜ್ಞೆಯ ಭಾಗವಾಗಿರುವುದು ಬಹಳ ಮುಖ್ಯ ಎನಿಸುತ್ತದೆ. ಕರಿ, ಬಿಳಿ, ದೇಹದ ಗುಣಗಳು, ಒಳ್ಳೆಯವ, ಭಕ್ತೆ, ಅರ್ಪಿತ ಎಂಬುದು ಕಲ್ಪನೆ ಹಾಗು ಅಹಂಕಾರವೇ ಆಗಿದೆ.ಇದು ಅಕ್ಕನದೇ ಭಾಷೆ ಎಂಬಂತಾಗಿದೆ.ಅವಳದೇ ವಚನ ಒಂದೂರಲ್ಲಿ ಒಂದೊಂದು ಭಾಷೆ ವಚನ ನೆನಪಿಗೆ ತರಿಸುತ್ತದೆ.

ಎನ್ನ ನಾಲಿಗೆಗೆ ಒಪ್ಪರುಚಿ ನಿಮಗರ್ಪಿತ

ಎನ್ನ ನಾಸಿಕಕ್ಕೆ ಒಪ್ಪರುಚಿ ಪರಿಮಳ ನಿಮಗರ್ಪಿತ,

ಎನ್ನ ಕಾಯಕ್ಕೆ ಒಪ್ಪರುಚಿ ಸುಖ ನಿಮಗರ್ಪಿತ, ಚನ್ನಮಲ್ಲಿಕಾರ್ಜುನಯ್ಯ,

ನಿಮಗರ್ಪಿಸದ ಮುನ್ನ ಮುಟ್ಟಲಮ್ಮೆನಯ್ಯ.(ವಚನಸಂಖ್ಯೆ:100)

ಎನ್ನಕಾಯ ಶಿವಾರ್ಪಿತವಾಗಿರುವುದರಿಂದ ನಾಲಿಗೆ, ನಾಸಿಕ, ಚರ್ಮದ ಸುಖಗಳೆಲ್ಲ ಅರ್ಪಿತ.ನಿಮ್ಮನ್ನ ಮುಟ್ಟದ್ದು ನನ್ನನ್ನು ಮುಟ್ಟಲಾರದು ಹಾಗು ತನಗೆ ಅವುಗಳು ಬೇಕಿಲ್ಲ ಎಂಬ ಅಂಶ ಕಾಣುತ್ತದೆ.(ವ.ಸಂ.395) ಜೀವಸರಪಳಿಯಲ್ಲಿ ಒಂದು ಇನ್ನೊಂದಕ್ಕೆ ಆಹಾರವಾಗಿರುವಾಗ ದೇಹ ನಿಮಗರ್ಪಿತ ಎಂಬ ಕಲ್ಪನೆಯೇ ಸುಳ್ಳು.ಭಕ್ತಿ, ನಾಚಿಕೆ, ನಾಒಳ್ಳೆಯವಳು ಎಂಬ ಕಲ್ಪನೆಯು ಡಂಭಾಚಾರದ ಹಾಗು ಹೇಸಿಗೆಯ ಗುಣವಾಗಿದೆ.ದೇಹ ದೊಡ್ಡಸ್ತಿಕೆಯ ಪ್ರದರ್ಶನಕ್ಕಾಗಿ. ದೇಹ ಸಾಧನೆಯ ಹಾದಿಗೆ ಅನಿವಾರ್ಯ. (ವಚನ ಸಂಖ್ಯೆ 306ರಲ್ಲಿ) "ತರುಗಳು ಹುಟ್ಟಲು ಬೆಟ್ಟ ಹೇಗೆ ಬೇಕಾಗುವುದೋ ಕಬ್ಬಿಣ ಕರಗಲು ಇದ್ದಿಲಿನ ಬೆಂಕಿಹೇಗೆ ಬೇಕಾಗುವುದೋ ಹಾಗೆ ನನಗೆ ದೇಹ ದೈವವೊಲಿಯಲು ಬೇಕಾಗಿರುವುದರಿಂದ ಕಾಯ ಇಲ್ಲದವಳು ಎಂದು ಕರೆದರೆ ಹೇಗೆ, ನನಗೆ ದೈವದರಿವು ಕೂಡಾ ದೇಹದ ಮುಖಾಂತರವೇ ಆಗುವುದರಿಂದದೇಹ ಇಲ್ಲದವಳು ಎಂದರೆ ಹೇಗೆ ಎಂದು ದೇಹದ ಅಸ್ತಿತ್ವವನ್ನು ಒಪ್ಪಿಕೊಳ್ಳುತ್ತಾಳೆ. ಇಂದ್ರಿಯಗಳ ಸುಖ ನಿಮಗರ್ಪಿತ.ದೇಹದ ಸುಖದ ಮುಖಾಂತರ ದೈವ ಅರಿಯುವ ನಡೆಯನ್ನು ಈ ವಚನದಲ್ಲಿ ಕಾಣುತೇವೆ. ಪಂಚೇಂದ್ರಿಯಗಳ ಸುಖ ಶಿವಾರ್ಪಿತವಾದನಂತರವಷ್ಟೆ ನನ್ನ ಸೋಕಲಿ ಎಂಬ ಭಾವವಿದೆ.

**(459ನೆಯ ವಚನ)** 'ಕಾಮವುಳ್ಳವರಿಗೆ ಕಾಯ ಸಂಗ ಮಚ್ಚು ನೋಡಾ ಬಯಕೆಗಳೇ ಪ್ರಧಾನವಾದವರಿಗೆ ಅಂಗ ಪ್ರೀತಿ, ಬಯಕೆ ಇಲ್ಲದೆ ನಡೆದವಂಗೆ ಲಿಂಗ ಪ್ರೀತಿ, ಕಾಮ ಗೆದ್ದ ಕಾಯದವನೆಡೆಗೆ ನನ್ನ ಸಂಗ" ಎನ್ನುತ್ತಾಳೆ.'ಕಾಯ' ಬೇಕು 'ಕಾಮವಿಲ್ಲದವನ' ಸಾಂಗತ್ಯಕ್ಕಾಗಿ.'ಕಾಯ ಅರ್ಪಿತ' ಕಲ್ಪನೆ ಸುಳ್ಳು ಎನ್ನುತ್ತಾಳೆ."ಸರ್ಪನ ಬಾಯ ಕಪ್ಪೆ ನೊಣಕ್ಕೆ ಹಾರುವಂತೆ" ಎಂಬ ವಚನದಲ್ಲಿ ಮನುಷ್ಯನ ಸ್ವಭಾವ, ಗುಣಗಳು ಬದಲಾಗದು.ಹಾಗಿದ್ದಾಗ ಕಾಯ ನಿನಗರ್ಪಿತ ಎಂಬುದೆಷ್ಟು ಸತ್ಯ ಎಂಬುದು ಅವಳ ಪ್ರಶ್ನೆ.

ಕಾಯ ಮೀಸಲಾಗಿ ನಿನಗರ್ಪಿತವಾಗಿತ್ತು.

ಕರಣ ಮೀಸಲಾಗಿ ನಿನಗರ್ಪಿತವಾಗಿತ್ತು.

ಆನೊಂದನರಿಯೆನಯ್ಯಾ ಎನ್ನಗತಿ ನೀನಾಗಿ ಎನ್ನ ಮತಿ ನೀನಾಗಿ,

ಎನ್ನ ಪ್ರಾಣ ನಿನಗರ್ಪಿತವಾಯಿತ್ತು, ನೀನಲ್ಲದೆ ಪೆರತೊಂದ ನೆನೆದಡೆ, ನಿಮ್ಮಾಣೆ – ಚನ್ನಮಲ್ಲಿಕಾರ್ಜುನ.' (169 ವಚನ ಸಂಖ್ಯೆ)

ಎನ್ನ ಬುದ್ಧಿ, ವಿವೇಕ, ಬದುಕು ಎಲ್ಲವೂ ನೀನೆ ಆದಮೇಲೆ ದೇಹ, ಇಂದ್ರಿಯಗಳು ನಿನಗೆ ಮೀಸಲು, ಅರ್ಪಿತ ಎಂದಲ್ಲವೇ.ಇನ್ನು ಅನ್ಯರ, ಅನ್ಯದ ಆಲೋಚನೆ ಹೇಗೆ ಬರಲು ಸಾಧ್ಯ ಎನ್ನುತ್ತಾಳೆ.ಕಾಯದ ಕಳವಳ ಧ್ಯಾನವೇ ಹೊರತಾಗಿ ಮತ್ತೇನೂ ಅಲ್ಲ ಎಂಬುದನ್ನು ಕಾಣುತ್ತೇವೆ.

ಕಾಯಕರ್ರನೆ ಕಂದಿಡೇನಯ್ಯಾ,

---- (162ನೇ ವಚನ)

ಕಾಯ ಎಂಬುದುದೈವಕ್ಕೆ ಒಲಿದ ನಂತರ ದೇಹ ಹೇಗಿದ್ದರೇನು?ಬಣ್ಣ ಎಂಬುದು ಲೋಕದ ಮಾತು, ಸುಂದರ ಎಂಬುದು ಲೋಕದ ಸತ್ಯ.ಅಂತರಂಗದ ಸತ್ಯ ಎಂಬುದು ದೈವ ಎಂದಾದಮೇಲೆ ದೇಹದ ಭಾಷೆಯಾದ ಸುಂದರ, ಕಪ್ಪು, ಬಿಳುಪು ಎಂಬುದರ್ಥವಿಲ್ಲದ್ದು ಎನ್ನುತ್ತಾಳೆ.

ನಾಳದಮರೆಯ ನಾಚಿಕೆ,

ನೂಲಮರೆಯಲ್ಲಿ ಅಡಗಿತ್ತೆಂದು ಅಂಜುವರು, ಅಳುಕುವರು,

ಮನಮೆಚ್ಚಿದಭಿಮಾನಕ್ಕೆ ಆವುದು ಮರೆ ಹೇಳಾ? (ವಚನಸಂಖ್ಯೆ257)

ಕಾಯಮಣ್ಣೆಂದು ಕಳೆದ ಬಳಿಕ ದೇಹದಭಿಮಾನ ಅಲ್ಲಿಯೇ ಹೋಯಿತು."ವಸ್ತ್ರ ಸಂಹಿತೆ ಎಂಬುದು ಹೆಣ್ಣು ಗಂಡು ಎಂಬ ಜೈವಿಕ ಕಲ್ಪನೆಗಳನ್ನು ಸಂಸ್ಕೃತಿಯ ಹಿನ್ನಲೆಯಲ್ಲಿ ನಿಯಂತ್ರಿಸುತ್ತಿದೆ".ಆದರೆ ದೇಹವೆಂಬುದು ನನಗೆ ಮಣ್ಣು ಎಂಬ ಸತ್ಯ ಅರಿವಾದಾಗ ದೇಹದಾಭಿಮಾನವೇ ಮರೆಯಾಯಿತು. ಬಯಲೆಂಬುದೇ ಪ್ರಾಣ ಎಂಬುದು ಅರಿವಾದ ಮೇಲೆ ಸಂಸ್ಕೃತಿಯ ಪ್ರಧಾನ ಭಾಗವಾದ ಲಜ್ಜೆ ಎಂಬ ಹೆಣ್ಣಿನ ಕಲ್ಪನೆಯು ಮರೆಯಾಯಿತು. **'ತಾನು'** ಎಂಬುದು ಮಲ್ಲಿಕಾರ್ಜುನನ ಕೂಡಿ **'ನಾಚಿಕೆ'** ಇಲ್ಲದವಳಾದೆ. ಉಟ್ಟ ಸೀರೆ, ಉಡುಗೆ ಇಲ್ಲವಾದ ಮೇಲೆ ಅಂಜಿಕೆ ಇನ್ನೆಲ್ಲಿಯದು ಎಂಬ ಪ್ರಶ್ನೆಯನ್ನು ಸಮಾಜಕ್ಕೆ ಹಾಕಿದಂತೆ ಕಂಡು ಬರುತ್ತದೆ.'ಲೋಕದ ಸಂಹಿತೆಗೆ ಗಂಡು ಹೆಣ್ಣು' ಎಂಬ ಕಲ್ಪನೆ, 'ವಸ್ತ್ರದ ಕಲ್ಪನೆಯೇ ಅವಶ್ಯವಿಲ್ಲದಾದಾಗ ತನ್ನನ್ನು ಇವ್ಯಾವು ಬಾಧಿಸಲಾರವು' ಎನ್ನುತ್ತಾಳೆ.

**ಕಾಯವ ಕೆಡಿಸದೆ ಉಳಿಸಿಕೊಳ್ಳಿರಯ್ಯ.ಆಹಾರವ ಕಿರಿದು ಮಾಡಿರಣ್ಣ . . . ಆಹಾರದಿ ವ್ಯಾದಿ ಹಬ್ಬಿ ಬಲಿವುದಯ್ಯ.** (ವಚನ 69) ಆಹಾರ ಹಿತಮಿತವಾಗಿದ್ದು ಆರೋಗ್ಯಕ್ಕೆ ಆದ್ಯತೆ ನೀಡಿ ಕಾಯವ ಕೆಡಿಸಿಕೊಳ್ಳದೆ ನೋಡಿಕೊಳ್ಳಿ.ಈ ಕಾಯಕ್ಕೆ ಚೆನ್ನಮಲ್ಲಿಕಾರ್ಜುನ ಬರುವವನು ಎನ್ನುವಾಗ ದೇಹ ಸಾಧನೆಯ ಹಾದಿಗೆ ಮೆಟ್ಟಿಲು. ದೈವದಾನುಭವ ಪಡೆಯುವ ಮಾರ್ಗ, ಮಾಧ್ಯಮದೇಹವೇ ಆಗಿರುವುದರಿಂದ ಅದರ ಬಗ್ಗೆ ಕಾಳಜಿ ಇರಬೇಕು ಎಂದು ತಿಳಿಸುತ್ತಾಳೆ.

**ಉಪಸಂಹಾರ**

ದೇಹವೇ ವಚನಕಾರ್ತಿಯರು ಕಂಡುಕೊಂಡ ರೂಪಕ. ಈ ರೂಪಕದ ಅಭಿವ್ಯಕ್ತಿಯೇ ಅವಳ ಭಾಷೆ. ದೇಹವನ್ನು ಅರಿತು ನಡೆದುದಾದರೆ ದೇಹದ ಸಾಂಗತ್ಯವೇ ಲೇಸು.ಅದರ ವಿಕಾರ ತಾಯಿ ರಕ್ಕಸಿಯಾದ ರೀತಿಯದು ಎನ್ನುತ್ತ ತಾನು ಹೆಣ್ಣಾಗಿ ಅನುಭವಿಸುವ ಅಭಿವ್ಯಕ್ತಿಗಳಿಗಿಂತ ನಿರ್ಲಿಂಗೀಕರಣಕ್ಕೆ ಒಳಗಾಗಿ ಕೇವಲ ಮನುಷ್ಯ ಸಂವೇದನೆ ಹಿನ್ನಲೆಯಲ್ಲಿ ಮಾತಾಡುತ್ತ ಅಂಥ ಒಂದು ಪರಿಸರ ಸೃಷ್ಟಿ ಮಾಡಿಕೊಂಡಿದ್ದಳು. ಅದರಲ್ಲಿ ತನ್ನ ಮಾತುಗಳನ್ನು, ಅನುಭವಗಳನ್ನು ಅಭಿವ್ಯಕ್ತಿಸಿದಳು .ವಚನಕಾರ್ತಿಯರು 'ಕಾಯದ ಅನುಭವದ ಹಿನ್ನಲೆಯ ಮಾತು ನಿರ್ಲಿಂಗೀಕರಣಗೊಳ್ಳುವ ಚಲನೆಯಲ್ಲಿ' ಸಾಗುವುದು ಭಿನ್ನ ಹಾದಿಯೇ. ಇಷ್ಟಲಿಂಗ ಕಲ್ಪನೆ ಗಂಡು–ಪುರುಷ ಕಲ್ಪನೆಯೇ ಆಗಿದ್ದರು. ತಾನು ಸಖಿ–ಸತಿ ಎಂಬ ಚಲನೆಯಲ್ಲಿಯೇ ಆರಂಭಗೊಂಡರೂ ನಿರ್ಲಿಂಗೀಕರಣಕ್ಕೆ ಒಳಗಾಗುವ ಚಲನೆ 'ನಾ ಹೆಂಗೂಸಲ್ಲ', 'ಬಸವನಿಗೆ ಮಡದಿ' ಎನ್ನಲಾಗದು, ಚನ್ನಮಲ್ಲಿಕಾರ್ಜುನನೆಂಬ ಗುರುವಂಗೆ ಜಗವೆಲ್ಲ ಹೆಣ್ಣು ಎನ್ನುತ್ತ ತಮ್ಮ ಜೈವಿಕ ಅಸ್ತಿತ್ವದ ಹೆಣ್ಣು ಕಲ್ಪನೆಯಿಂದ ಹೊರಬರಲು ಹವಣಿಸುವ ರೀತಿಯ ಶರಣೆಯರ ಒಂದು ವರ್ಗ, ವಚನಕಾರ್ತಿಯರಲ್ಲಿ ಭಿನ್ನ ಗುಂಪೆಂದೇ ನೋಡ ಬಯಸುತ್ತೇನೆ. ಸಮಾಜದ ನಿಯಮಿತ ಕಲ್ಪನೆಗಳ ಒಡೆಯುವ ಕೆಲಸಗಳಲ್ಲಿ ಈ ಬರಹಗಾರ್ತಿಯರು ಪ್ರಮುಖರೆಂದೆನಿಸಿಕೊಳ್ಳುತ್ತಾರೆ. ವಿಚಾರ–ತತ್ವ–ಅನುಭವಗಳಿಗೆ ದೇಹವೇ ಮಾಧ್ಯಮ ಎಂದೂ ಒಪ್ಪಿಕೊಂಡರೂ ಸಾಧನೆಯ ಹಾದಿಗೆ ಜೈವಿಕ ಗುಣ ಅಡ್ಡಿಯಾಗಿದ್ದರು, ಅದು

ಮೊದಲ ಮೆಟ್ಟಿಲು ಮಾತ್ರ ಎಂದು ಅದನ್ನು ಸೀಮಿತಗೊಳಿಸಿ, ಸಮಾಜದ ಲಕ್ಷ್ಮಣ ರೇಖೆಯನ್ನು ದಾಟಿಮನುಷ್ಯ ಪ್ರಜ್ಞೆ ಭಾಗವಾಗಿ ತಮ್ಮನ್ನು ರೂಪಿಸಿಕೊಳ್ಳಲು ಪ್ರಯತ್ನಿಸುವುದನ್ನು ಮೇಲಿನ 'ಕಾಯ ಕಲ್ಪನೆಯ' ರೂಪಕದ ಅಧ್ಯಯನದ ಹಾದಿಯಲ್ಲಿ ಗೋಚರವಾಗುತ್ತದೆ.

ಮೇಲಿನ ಎಲ್ಲ ವಿವರಗಳು, ವಚನಗಳು ಹೆಣ್ಣಿನ ಭಾಷೆ ಎಂಬುದು ಕಾಲ, ಸನ್ನಿವೇಶದ ಹಿನ್ನಲೆಯಲ್ಲಿ ಬೆಳೆದರು, ಮಾನಸಿಕ ಪ್ರಜ್ಞೆಯ ಬೆಳವಣಿಗೆಯ ಹಾದಿಯಲ್ಲಿನ ಮೊದಲ ಹೆಜ್ಜೆಗಳು ಎಂದೆನಿಸುತ್ತವೆ. ಇದು ಪಾಶ್ಚಾತ್ಯರ ಚಿಂತನೆಗಿಂತ ಭಿನ್ನವಾದುದು.ಗಂಡಿನ ವಿರೋಧವಾಗಿ ಬೆಳೆದದ್ದಲ್ಲ. ಭಾಷೆ ಮನುಜನ ಅನುಭವಗಳ ಅಭಿವ್ಯಕ್ತಿಯೊಂದಿಗೆ ಇರುವಂಥದ್ದು ಎಂಬುದು ಸ್ಪಷ್ಟಗೊಳ್ಳುತ್ತದೆ.

**ಪರಾಮರ್ಶನ ಗ್ರಂಥಗಳು:**


1. ನುಡಿಯೊಳಗಾಗಿ: ಓ.ಎಲ್ .ನಾಗಭೂಷಣ ಸ್ವಾಮಿ.
2. ಸ್ತ್ರೀ ಮತವನುತ್ತರಿಸಲಾಗದೆ –ಎಂ.ಎಸ್. ಆಶಾದೇವಿ.
3. ಭಾರತೀಯ ಭಕ್ತಿ ಚಳುವಳಿಗಳು –ಷಣ್ಮುಕಯ್ಯ ಅಕ್ಕೂರಮಠ, ಕನ್ನಡ ಸಾಹಿತ್ಯ ಪರಿಷತ್ತು,2000.
4. ಅಭಿನವ ಚಾತುರ್ಮಾಸಿಕ : ಭಕ್ತಿ ಕಂಪಿತ: ಲಕ್ಷ್ಮೀಶ್ ತೋಳ್ಪಾಡಿ.
5. ಶಿವಶರಣೆಯರ ವಚನಗಳು, ಸಮಗ್ರ ಸಂಪುಟ,ಸಂ: ಡಾ.ಆರ್.ಸಿ.ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ ಪ್ರಕಾಶನ, ಧಾರವಾಡ.
6. ಅಲಕ್ಷಿತ ವಚನಕಾರ್ತಿಯರ ಜೀವನ ದೃಷ್ಟಿ: ಬಿ. ಎಂ. ಪುಟ್ಟಯ್ಯ.